ಹೆಚ್ಚಾಗಿ ಈ BWSSB ಬಗ್ಗೆ ಅವರೇನು ಭೀತಿಗಳನ್ನು ವ್ಯಕ್ತ ಮಾಡಿದ್ದಾರೆ, ಅವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅಂತಿಮ ತೀರ್ಮಾನಕ್ಕೆ ಮುನ್ನ ಮಾನ್ಯ ಹಿರಿಯ ಸದಸ್ಯರುಗಳ ಜೊತೆಗೆ ಚರ್ಚೆ ಮಾಡಲಾಗುವುದೆಂದು ಮೇಲ್ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳೇನು ರಿಪೋರ್ಟ್ ಬಂದ ಮೇಲೆ ತಮ್ಮ ಜೊತೆ ಚರ್ಚೆ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಫೈನಲ್ ಆಗಿ ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕಿಂತ ಮುಂಚೆ ನಿಮ್ಮೊಡನೆ ಚರ್ಚೆ ಮಾಡುತ್ತೇನೆಂದು ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಅಲ್ಲಿಗೆ ನಿಲ್ಲಿಸಿ ಬಿಡೋಣ. ಆದುದರಿಂದ, ಆ ಚರ್ಚೆಗಾದರೂ ಅವಕಾಶವಿಟ್ಟುಕೊಳ್ಳೋಣ, ಇದರಲ್ಲಿ ಯಾವ ಹ್ಯಾಂಕಿ ಪ್ಯಾಂಕಿನೂ ಇಲ್ಲ, ಅದರೊಳಗೆ ಇದನ್ನು ತೂರಿ ನೋಡುವುದು ಬೇಡ ಎಂದು ಮಾನ್ಯ ಸದಸ್ಯರಲ್ಲಿ ನಾನು ಮನವಿ ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಅವರು ಇಷ್ಟು ಹೊತ್ತು ಆ ಕಂಪನಿಯ ಪ್ರೊಫೈಲ್ ಓದಿದರು ಎಂದು ಕಾಣುತ್ತದೆ, ನಾನೂ ಕೂಡ ನನ್ನ ಬಯೋಡೇಟಾದಲ್ಲಿ ಬಹಳ ಹಾಕಿಕೊಳ್ಳುತ್ತೇನೆ, ನಾನು ಆವಾಗಲೇ ರೆಫರ್ ಮಾತ್ರ ಮಾಡಿದೆ ಪಾರ್‌ಚೂನ್‌ದ್ದು 10ನೇ ಜೂನ್ 2002 ಒಂದು ತಿಂಗಳ ಹಿಂದಿನದು.

"Vivend's stock has plunged, debt has soared.... workers want CEO Jean Mary Messier's head. Now what?

Judging from the charter, Vivend Universal's Chairman and CEO Jean Mary Messier headed for guillotine. He is being ousted by his French Director who are planning to break-up the company. Throughout his stay... whisper of bankruptcy or atleast a major liquidity crisis. The trumpet of gossip is some of it may be put at rest at Vivendi's May 29th board meeting speaks to the mess messier has made ನಾನು ಬಂದು ಓದುತ್ತೇನೆ ಅಷ್ಟೆ. ಇದು ನನ್ನದಲ್ಲ The Emperor says, Emperor means Vivendi's CEO, the banking source who has known him for years; The cmperor is down to his bikini underpants.

SRI. D.B.CHANDRE GOWDA: Thank you for the information. I also keep that information before finalising.

ಶ್ರೀ ಪಿ.ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಪ್ರಶ್ನೆ ಇರುವುದಿಷ್ಟೆ, ನಾನು ನೇರವಾಗಿ ಬರುತ್ತಿದ್ದೇನೆ, ಸುತ್ತಿಬಳಸಿ ಮಾತನಾಡುವ ಅಗತ್ಯವಿಲ್ಲ; 1964 ರಲ್ಲಿ ಬಿಡಬ್ಲ್ಯೂಎಸ್‌ಬಿ ಆಕ್ಟ್ ಅನ್ನು ರಚನೆ ಮಾಡಲಾಗಿದೆ, ಆ ಆಕ್ಟ್ ಪ್ರಕಾರ ನಡೆದುಕೊಳ್ಳಬೇಕು ನೀವು ಬಿಡಬ್ಲ್ಯೂಎಸ್‌ಎಸ್‌ಬಿ ಮಾರಾಟ ಮಾಡುಬಿಟ್ಟಿದ್ದೀರೆಂದು ಹೇಳುವಷ್ಟು ದಡ್ಡರು ನಾವೇನಲ್ಲ ಆ ಆಕ್ಟ್ ಪ್ರಕಾರ ಪ್ರೈವೇಟ್ ಪಾರ್ಟಿಸಿಪೇಟ್‌ಗೆ ಜೊನ್ಸ್‌ಗಳಲ್ಲಿ 2 ಜೊನ್ಸ್ ಅನ್ನು ಈ ಎರಡು ಬೋಗಸ್ ಕಂಪನಿಗಳಿಗೇನು ಕೊಟ್ಟಿದ್ದೀರಿ, ಇವುಗಳೊಡನೆ ನೆಗೋಸಿಯೇಷನ್ ಮಾಡಿಕೊಳ್ಳಲು ನಿಮಗೆ ಅಧಿಕಾರವಿಲ್ಲ; ಈ ಆಜ್ಞೆಯನ್ನು ಇಮತ್ತು ತಡೆ ಹಿಡಿಯಬೇಕೆಂದು ನಾವು ದರಣಿ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಜನತಾದಳ (ಎಸ್) ಹಾಗೂ ಜನತಾದಳ (ಯು) ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸಿದರು)